ಇ) 300 ಶುಶ್ರೂಷಾ ಹುದ್ದೆಗಳು ಖಾಲಿ ಇರುತ್ತವೆ.

ಈ) ಶುಶ್ರೂಷರ ಹುದ್ದೆಗಳನ್ನು ಭರ್ತಿಮಾಡುವಾಗ ರಾಜ್ಯದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

ಜೆ.ಸಿ. ನಗರ ಮಥದಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆಗಳ ಅಭಿವೃದ್ಧಿ.

2242 - ಶ್ರೀ ಆರ್. ಕೃಷ್ಣಪ್ಪ (ಜಯಮಹಲ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಯಮಹಲ್ ವಿಧಾನಸಭೆಯ ಮತಕ್ಷೇತ್ರಕ್ಕೆ ಸೇರಿದ ಜೆ.ಸಿ ನಗರ, ಮರದಹಳ್ಳಿ ಹಾಗೂ ನ್ಯೂ ಸವಾರ್ ಲೈನಗಳಲ್ಲಿ ಒಟ್ಟು ಎಷ್ಟು ಸರ್ಕಾರಿ ಪ್ರಾಥಮಿಕ ಶಾಲೆಗಳಿವೆ?

ಆ) ಈ ಶಾಲೆಗಳಲ್ಲಿ ಹಲವಾರು ನ್ಯೂನತೆಗಳಿರುವುದು. ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಶಾಲೆಗಳನ್ನು ಅಭಿವೃದ್ಧಿಗೊಳಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಹೆಚ್. ಜಿ. ಗೋವಿಂದ ಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) .

ಅ) 24

ಆ) 1. ಸರ್ಕಾರಿ ಕನ್ನಡ ಮಾ. ಪ್ರಾ. ಶಾಲೆ ಗಂಗಾನಗರ.

2. ಸರ್ಕಾರಿ ಕನ್ನಡ ಮಾ. ಪ್ರಾ. ಶಾಲೆ ಮುನಿರೆಡ್ಡಿಪಾಳ್ಯ

3. ಸರ್ಕಾರಿ ಉರ್ದು ಮಾ. ಪ್ರಾ. ಶಾಲೆ ಮುನಿರೆಡ್ಡಿಪಾಳ್ಯ

ಈ ಮೂರು ಶಾಲೆಗಳಿಗೆ ಸ್ವಂತ ಕಟ್ಟಡ ಹಾಗೂ ನಿವೇಶನ ಲಭ್ಯವಿಲ್ಲದೆ ಬೆಂಗಳೂರು ಮಹಾನಗರಪಾಲಿಕೆ ಕಟ್ಟಡದಲ್ಲಿ ನಡೆಯುತ್ತಿದೆ.

4. ಸರ್ಕಾರಿ ಕನ್ನಡ ಮಾ. ಪ್ರಾ. ಶಾಲೆ ನ್ಯೂಸವಾರ್ ಲೈನ್ ಈ ಶಾಲೆಯು ಸ್ವಂತ ಕಟ್ಟಡ ಮಿಲ್ಟ್ರಿ ಇಲಾಖೆಗೆ ಸೇರಿದ ಜಾಗದಲ್ಲಿದ್ದು ಈ ನಿವೇಶನವನ್ನು ಶಿಕ್ಷಣ ಇಲಾಖೆಗೆ ಹಸ್ತಾಂತರಿಸಿಕೊಳ್ಳಲು ಪತ್ರ ವ್ಯವಹಾರ ನಡೆಯುತ್ತಿರುತ್ತದೆ.

ಇ) ಮೇಲ್ಕಂಡ ಶಾಲೆಗಳಿಗೆ ಕಟ್ಟಡ ನಿರ್ಮಿಸಲು ನಿವೇಶನ ಪಡೆಯಲು ಬೆಂಗಳೂರು ಮಹಾನಗರ ಪಾಲಿಕೆಯನ್ನು ಕೋರಿದೆ.

ಗುಂಡ್ಲುಪೇಟೆ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಸಿಬ್ಬಂದಿಯ ನೇಮಕ.

2243 - ಶ್ರೀ ಹೆಚ್. ಎನ್. ಮಹದೇವ್. ಪ್ರಸಾದ್ (ಗುಂಡ್ಲಪೇಟೆ) : ಮಾನ್ಯ ಆರೋಗ್ಯ, ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸವರೆ?

ಅ) ಗುಂಡ್ಲುಪೇಟೆ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ತಜ್ಞ ವೈದ್ಯರುಗಳು ಮತ್ತು ಇತರ ನೌಕರರ ಸ್ಥಾನಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಅ) ಹಾಗಿದ್ದಲ್ಲಿ ಯಾವ ಯಾವ ಹುದ್ದೆಗಳು ಎಷ್ಟು ಖಾಲಿ ಇವೆ?

ಇ) ಇವುಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆಯೇ?

ಈ) ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಲು ಕ್ರಮ ಕೈಗೊಳ್ಳಲಾಗಿದೆಯೇ?

ಉ) ಹಾಗಿದ್ದಲ್ಲಿ ತೆಗೆದುಕೊಂಡಿರುವ ಕ್ರಮಗಳೇನು?

ಡಾ|| ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬಂದಿದೆ.

ಆ) ವೈದ್ಯರು - 1
'ಸಿ' ವರ್ಗದ ಹುದ್ದೆಗಳು - 9
'ಡಿ' ವರ್ಗದ ಹುದ್ದೆಗಳು - 16

ಇ) ಖಾಲಿ ಇರುವ ವೈದ್ಯರ ಹುದ್ದೆಯನ್ನು ಸ್ನಾತಕೋತ್ತರ ವ್ಯಾಸಂಗ ಮುಗಿಸಿ ಬರುವ ವೈದ್ಯರಿಂದ ತುಂಬಲು ಮತ್ತು ಸಿ ಮತ್ತು ಡಿ ವರ್ಗದ ಹುದ್ದೆಗಳನ್ನು ನೇಮಕಾತಿಯಿಂದ ತುಂಬಲು ಕ್ರಮ ಕೈಗೊಳ್ಳಲಾಗುವುದು.

ಈ) ಸದರಿ ಸಾರ್ವಜನಿಕ ಆಸ್ಪತ್ರೆ, ಗುಂಡ್ಲುಪೇಟೆ ಇಲ್ಲಿ ಹಾಲಿ ಇರುವ 24 ಹಾಸಿಗೆಯಿಂದ 50 ಹಾಸಿಗೆಗೆ ಮೇಲ್ದರ್ಜೆಗೇರಿಸಲು ವಿಶ್ವಬ್ಯಾಂಕ್ ನೆರವಿನ ಯೋಜನೆಯಡಿಯಲ್ಲಿ ಪರಿಶೀಲಿಸಲಾಗುತ್ತದೆ.

ಉಡುಪಿ ತಾಲ್ಲೂಕಿನಲ್ಲಿರುವ ಪ್ರೌಢ ಶಾಲೆ ಮತ್ತು ಕಾಲೇಜುಗಳ ಸಂಖ್ಯೆ .

2245 - ಶ್ರೀ ಕೆ. ಪ್ರತಾಪ್ ಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕಿನಲ್ಲಿರುವ ಪ್ರೌಢ ಶಾಲೆಗಳು ಪದವಿ ಪೂರ್ವ ಕಾಲೇಜುಗಳೆಷ್ಟು?

ಆ) ಕೊರತೆ ಇರುವ ಕೊಠಡಿಗಳ ಸಂಖ್ಯೆ ಎಷ್ಟು? ಪ್ರೌಢ ಶಾಲೆ ಕಾಲೇಜುಗಳ ವಿವರ ನೀಡುವುದು.

ಶ್ರೀ ಹೆಚ್. ಜಿ. ಗೋವಿಂದ ಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು).

ಅ) ಪ್ರೌಢಶಾಲೆಗಳು - 15
ಪದವಿ ಪೂರ್ವ ಕಾಲೇಜುಗಳು - 13

ಆ) ಪ್ರೌಢ ಶಾಲೆಗಳಲ್ಲಿ 14 ಕೊಠಡಿಗಳು
ಪದವಿಪೂರ್ಣ ಕಾಲೇಜುಗಳಲ್ಲಿ 9 ಕೊಠಡಿಗಳು (ಪಟ್ಟಿ ಲಗತ್ತಿಸಿದೆ)